ಹಿಂಗಾರೆ, ದೇವಸ್ಥಾನದಲ್ಲಿ ಚಂಡಿಕಾ ಹೋಮ, ಪಾರಾಯಣ ಎಲ್ಲ ಆತಿ ಇರುತ್.

ನಂಗ್ ಪಾರಿಜಾತ ಹೂ ಅಂದ್ ಕೂಡ್ಲೇ ಒಂದು ನೆನಪಾಯ್ತ್. ಪಾರಿಜಾತದ ಗಿಡ ಅಷ್ಟು ಸುಲಭದಂಗೆ ಬೆಳೂದಿಲ್ಲ. ಎಷ್ಟಾರೂ ಶ್ರೀಕೃಷ್ಣ ಪರಮಾತ್ಮ ಪ್ರಿಯ ಪತ್ನಿ ಸತ್ಯಭಾಮಾಳಿಗೆ ದೇವಲೋಕದಿಂದ ತಂದ ಗಿಡ ಅಲ್ದಾ. ಅದ್ನ ಕದ್ದೇ ತರ್ಬೇಕು ಅಂತ ನಾನೂ ಕದ್ ಅದ್ನ ತಂದ್ ಬೆಂಗಳೂರು ಮನಿ ಮೇಲಿಪ್ಪು ದೊಡ್ಡ ಗಾತ್ರದ ಹೂಕುಂಡದಂಗೆ ಹಾಕ್ದೆ ಕಾಣಿ. ಅದು ಕೆಲವೇ ವರ್ಷದಲ್ಲಿ ಒಳ್ಳೆ ಹೂಬಿಡು ಹಂಗಾಯ್ತ್. ಕದ್ರೂ ಪಾರಿಜಾತನೇ ಕದಿಕ್ ಅನಿಸೋಷ್ಟು ಚಂದದ ಮುಗುಳು ತಾರಸಿ ಮೇಲೆ ಬೀಳ್ತಿರ್ತ್. ನನ್ ಕುಂದ ನೆಲದ ಕಂಪು ಆಗಾಗ ಪಾರಿಜಾತದೊಳಗೂ ಹೊಕ್ಕ್, ಅದರ ಘಮಲು ಮನ್ಸೆಲ್ಲ ತುಂಬುತ್.

ಹಂಗ್ ನವರಾತ್ರಿ ಆಯ್ತುಂಬಂಗೆ ಕಾರ್ತಿಕ ಮಾಸ ಅಂದರೆ ದಿವಾಳಿ ತಿಂಗ್ಳ್ ಶುರು ಆತ್. ದೀಪಾವಳಿಯಲ್ಲಿ ನೀರ್ ತುಂಬ್ತ್ರ್, ಬಲಿನ ಕರೀತ್ರ್. ಗದ್ದಿಗೆಲ್ಲ ದೀಪ ಇಟ್ ಭೂಮ್ತಾಯಿ ಮಕ್ಳ್ ಸಂಭ್ರಮ ಮಾಡ್ತಾರ್. ಹಾಂಗ್ ಚಳಿ ಶುರು ಆತ್. ಜತಿಗೆ ಸಾಲು ಸಾಲು ಜಾತ್ರಿ ಶುರು ಆತ್. ಆನಿಗುಡ್ಡಿ ಜಾತ್ರಿ, ಕೋಟೇಶ್ವರದ ಕೊಡಿ ಹಬ್ಬ. ಸಾಲಿಗ್ರಾಮದ ನರಸಿಂಹಸ್ವಾಮಿ ಜಾತ್ರಿ ಹಿಂಗೆ. ಆ ತೇರು, ಈ ತೇರು ಅಂದ್ಹೇಳಿ ಶುರು ಆತ್ ಕಾಣಿ ತೇರಿದೇ ತೇರು. ಕೊಡಿ ಹಬ್ಬದಲ್ ಹೊಸ್ದಾಯಿ ಮದಿ ಆದ್ ಮದ್ಮಕ್ಕಳ್ ಕಬ್ಬಿನ ಕೊಡಿ ತಕ್ಕಂಡ್ ಹೋತ್ರು.

ಕಳೆದ ವಾರದ 'ಚೆನ್ನುಡಿ' ಒಂದಾನೊಂದು ಕಾಲದಾಗ... ನಡು ಮಧ್ಯಾಹ್ನದಾಗ... ಕೇಳಿ ಜಾಹ್ನವಿ ಹಳ್ಳೂರ ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.



ವರ್ಷ ಆಪುದ್ರೊಳಗೆ ಅವ್ರ್ ಮನೆಯಲ್ ಚಂದದ ಪುಟಾಣಿಗಳು ಬರ್ಲಿ ಅಂಬೂ ಆಸಿ ಇಟ್ಕಂಡ್. ಊರಿಗ್ ಊರೇ ಸಡ್ಗರದಲ್ ಭಾಗಿಯಾಪು ತೇರು. ಎಲ್ಲೆಲ್ಲಿಂದನೂ ಕೊಡಿ ತಿಂಗಳಲ್ಲಿ ನಾಲ್ಕ್ ದಿನ ಕೆಲ್ಸಕ್ ರಜಿ ಮಾಡಿ ಕೋಟೇಶ್ವರದ ಜಾತ್ರಿಗೆ ಬತ್ರ್. ಹೊಸ ಬಟ್ಟೆ ಹಾಯ್ಕಂಡ್ ತೇರು ಕಾಂತ್ರ್. ತೇರು ಎಲ್ಲಾ ಸಿದ್ಧ ಆಯಿ, ಇನ್ನೇನೂ ತೇರು ಎಳುಕ್ಕಿಂತ ಮುಂಚೆ ಎಲ್ಲೋ ಇದ್ದ ಗರುಡ ಬಂದ್ ತೇರಿಗೆ ಮೂರು ಸುತ್ತ್ ಹಾಕ್ಕತ್ತ್. ಕಡಿಗೆ ತೇರ್ನ ಎಳೀತ್ರ್. ಪ್ರಕೃತಿಯೆಂಬುದು ಒಂದು ದೈವಿಕ. ನಾವೆಲ್ಲ ಅದರ ಭಾಗ ಅಂತ ಅನ್ಸೂದೇ ಆ ಕ್ಷಣ ಅಲ್ದಾ..

ಹಿಂಗ್ ತಿಂಗಳೆಲ್ಲ ಕಳೀತಾ ಹೋತ್. ಅಸೋಡಿಯಿಂದ ಕೊಡಿವರ್ಗೆ. ಒಂದೊಂದು ತಿಂಗಳಲ್ ಒಂದೊಂದು ಆಚರ್ಣೆ, ಬಗಿ ಬಗಿ ನಂಬವಳಿ. ಅಲ್ಲೆಲ್ಲ ಇಪ್ಪು ಉದ್ದೇಶ ಒಂದೇ. ಮನ್ಸರು ಏಗಳೂ ಒಟ್ಟಾಯೇ ಇರ್ಕ್ ಅಂದ್ಕಂಡ್ ಮಾಡ್ದ್. ಈಗ ಯಾರ್ಗೆ ಪುರುಸೊತ್ತ್ ಇತ್ತ್ ಹೇಳಿ ಕಾಂಬ. ಅದ್ರಲ್ಲೂ ಒಟ್ಟಾಪ್ಪುಕ್ ಪುರುಸೊತ್ತ್ ಕೊಡ್ತ್ರಾ ಯಾರಾರೂ. ಆಟಿಯಂಗೆ ಮೈಯಿದ್ ನಂಜ್ ಹೋಯ್ಲಿ ಅಂದ್ಕಂಡ್ ಕಾಸರ್ಕನ ಬೇರಿದ್ ಕಷಾಯ ಕುಡಿಸ್ತ್ರ್. ಆರ್ರೆ ಮನಸ್ಸಲ್ಲಿಪ್ಪು ನಂಜ್ ತೆಗೂಕೆ ಯಾವ ಔಷಧ ಇಪ್ಪು? ಹೇಳಿ.

ಒಬ್ಬೊಬ್ಬ ಮನ್ರಿಗೊಂದ್ ಮನಿ ಆಯಿತ್. ಒಂದು ಮಾತ್ ಆಡೂಕೂ ಇಲ್ಲ, ಒಂದ್ ಮಾತ್ ಕೇಂಬೂಕೂ ಇಲ್ಲ ಹಂಗಾಯ್ತ್. ಮನ್ರ ಮುಖದ್ ಮೇಲಿದ್ ನೈಗೆ ಕಮ್ಮಿ ಆಯ್ತ್. ಮಾತಾಡುದ್ ಮೊದ್ಲೇ ಇಲ್ಲಾ ಹಂಗಾಯ್ತ್. ಮನಿ ಮನಿಯಂಗಿಪ್ಪು ಕಾರು, ಬೈಕ್, ಮೊಬೈಲ್, ಟಿ.ವಿ. ಫ್ರಿಜ್, ವಾಷಿಂಗ್ ಮಿಷೀನ್ ಎಲ್ಲಾ ಮಾತಾಡ್ತೊ, ಎಲ್ಲ ಶಬ್ದ ಮಾಡ್ತೋ. ಕಡಿಗೆ ಮನಿಯಲ್ ಸಾಕದ್ ದನ, ನಾಯಿ, ಬೆಕ್ಕು ಅವೆಲ್ಲ ಅವುಗಳ ಭಾಷಿಯಲ್ಲೆ ಎಂಥಾದರೂ ಹೇಳ್ತೋ. ಮಾತಾಡ್ತೊ, ಚೂರು ಎದಿಯಂಗ್ ಪಸಿಯಾರೂ ಇಟ್ಕಂಡಿದೋ. ಆರೆ ಮನ್ಸ್ರು ಊಹೂ ಮಾತಾಡೂದಾ... ಯಬ್ಬೇ... ಎಲ್ ಮಾತಾಡ್ರೆ ಕಮ್ಮಿ ಆಯಿ ಬಿಡ್ತ್ ಅಂದ್ಕಂಡ್ ದೂರ್‌ದೂರ್ವೇ ಉಳಿದು ಬಿಡ್ತ್ರ್.

ಒಂದ್ ಮನಿ ಒಡ್ದು ಮೂರು ಮನಿ ಆಯಿತ್. ಅಂಗಳ್ದಲ್ಲೂ ಒಂದು ಮನಿ ಎದ್ದಿತ್, ಹಿತ್ಲಂಗೂ ಮತ್ತೊಂದು ಮನಿ ಎದ್ದಿತ್. ಊರು ತುಂಬಾ ಮನಿಗಳೇ ಇದ್ದೋ, ಮನ್ಸನ್ನೂ ಮಾತ್ರ ಹುಡ್ಕಕ್ ಅಷ್ಟೆ. ಕಷ್ಟಕ್ ಆಪುಕೆ ಬತ್ರಾ ಅಂದ್ರೆ ಮನಿ ಮನಿ ಮಧ್ಯೆ ಇಪ್ಪು ಗ್ವಾಡಿ ಕಾಣ್ಕ್ ಅಷ್ಟೆ.

ಅವ್ನೊ ಅವ್ನೊ ಒಳ್ಳೆ ಸಾಧ್ನಿ ಮಾಡಿರ್ ಅಂತ ಅನ್ನಂಕ್ ಅಂದ್ರೆ ಒಂದ್ ಮನಿ ಕಟ್ಕ್, ಜತಿಗೆ ಒಂದು ಕಾರ್ ತಕ್ಕಂಡ್ಕ್. ಮನಿ ಕಟ್ಟೊದು, ಕಾರು ತಕ್ಕಂಬೂದ್ ಅದೇ ದೊಡ್ಡ ಸಾಧ್ನಿ ಆಯಿ ಹೋಯಿತ್ ಬಿಟ್ರೆ, ಕಟ್ಟದ್ ಮನಿಯಲ್ ಎಷ್ಟು ಜನ ಒಟ್ಟಾತ್ರೂ ಅಂಬೂದೆಲ್ಲ ಲೆಕ್ಕಕ್ ಇಲ್ಲದಂಗಾಯ್ತ್. ಇಪ್ಪು ಕಾರಲ್ಲಿ ಎಲ್ಲಿಗ್ ಹೋತ್, ಎಷ್ಟು ಜನ ಹೋತಂಬುದೂ ಬೇಡ ಆಯ್ತ್. ಹಬ್ಬ ಬತ್, ಹೋತ್. ಮನ್ಸ್‌ಗಳೆಲ್ಲ ಒಟ್ಟಾಯಿತ್ ಕೇಂಡ್ರೆ ಹೇಳೂಕೆ ಕಷ್ಟ ಆತ್. ಒಬ್ಬರಿಗಿಂತ ಒಬ್ರು ದೊಡ್ಡ್ ಕಾರ್ ತಕಂಬೂಕ್ ಕಾಂತಿತ್. ಆರೆ, ಕಾರ್ನಲ್ ಜನ ಕಮ್ಮಿ ಆತಾನೇ ಹೋತಿತ್.

ಮಕ್ಕೆಲ್ಲ ಇಂಗ್ಲಿಷ್ ಮಾತಾಡೂದು ದೊಡ್ಡ ವಿಷ್ಯ ಆಯಿ ಸುಮಾರ್ ವರ್ಷವೇ ಆಯಿತ್. ಆರ್ರೆ ಭಾಷಿ–ಬದ್ಕ್ ಒಂದ್ ಲಯದಲ್ಲಿ ಇಪ್ಪು ಅಚ್ಚ ಕುಂದಾಪ್ರ ಕನ್ನಡನ ಮನಿ ಮಕ್ಕಳೊಟ್ಟಿಗೆ ಮಾತಾಡೂಕೂ ಹಿಂದ್ ಮುಂದ್ ಕಾಂಬೂ ಹಂಗೆ ಆತಿತ್. ಜನಪದ ಕಥಿಯಲ್ ಬಪ್ಪು 'ಸಿರಿ' ದಾಟಿದ ಮಾಬುಕಳ ಹೊಳಿಯಂಗ್ ಸುಮಾರು ನೀರ್ ಹರ್ದು ಹೋಯಿತ್. ಕಾಲ ಬದಲಾತಿತ್ ಅಂಬೂ ಹಳಹಳಿಕೆ ಮುಂದೆ ಕರಾವಳಿ ಉದ್ದಕ್ಕಿರೋ ಕಡ್ಲು ಮಾತ್ರ ಹಂಗೆ ಸ್ಥಿರವಾಯಿ, ಘನ ಗಂಭೀರ್ದಂಗೆ ತನ್ನ ಗುಣ ಬಿಟ್ಕ್‌ಕೊಡ್ದಂಗೆ; ಎಲ್ಲಾ ಕಾಂತಿದ್ದೆ ಅಂಬೋ ಧಾಟಿಯಲ್ಲೇ ಭೋರ್ಗರೀತೀರತ್. ಹಂಗೆ ನಮ್ಗೂ ಆಪುಕಾಯಿರೆ ಎಷ್ಟ್ ಒಳ್ಳೆದಿತ್ ಅಲ್ದಾ?

■



ಕೊಡಿ ಹಬ್ಬದ ಸಂಭ್ರಮ
ಚಿತ್ರ: ಪ್ರಜಾವಾಣಿ ಆರ್ಕೈವ್ಸ್